"ಪ್ರೀತಿ ಪ್ರೀತಿ ಪ್ರೀತಿ ಅಂತ ಅಲೀತಿದ್ದಾಗ ಒಂದು ಪ್ರಶ್ನೆ ಕೇಳ್ಬಹುದಿತ್ತಲ್ಲ. ಹತ್ತು ಹೆರೋದಾದ್ರೆ ಸರಿ. ಇಲ್ಲವಾದ್ರೆ ಬೇಡ ಅಂತ. ನಾನು ಪ್ರೀತ್ಸೋದು ಹೆರೋರನ್ನ. ಅಲ್ಲದ್ದನ್ನು ಅಲ್ಲ ಅಂತ ಹೇಳ್ಬೇಕಿತ್ತಲ್ವ?"

ಸುಮ್ನಿದ್ದ.

ಅಂದ್ಲು, "ನಾಳೆ ರಜೆ ಹಾಕಿ. ಅಪ್ಪ ಅಮ್ಮ ಬರ್ತಾರೆ. ನಿಮ್ಮ ಅಪ್ಪ ಅಮ್ಮನ್ನ ಇರೋಕ್ಕೇಳಿ."

★★★

ಮಂದಾಕಿನಿ ಮೌನ ಮುರಿದ್ಲು.

"ಮಗು ಬೇಡ ಅಂತ ನಾನ್ಯಾವತ್ತೂ ತಡೆಹಿಡಿದಿರಲಿಲ್ಲ. ಅದು ಆಗಲಿಲ್ಲ. ಎಲ್ಲ ಬೇಕು ಅಂದ್ರಿ. ಎಲ್ರೂ ಹೇಳಿದ್ದನ್ನ ಮಾಡಿದ್ದೀನಿ. ಉಳೀಲಿಲ್ಲ. ಹೋಯ್ತು. ಆದ್ರೆ ಸತ್ತದ್ದು ಅದು. ನಾನಲ್ಲ. ನನಗೆ ಬದುಕಬೇಕಿದೆ."

ಅತ್ತೆ ಬಾಯ್ಬಿಟ್ರು.

"ಏನ್ ಕಮ್ಮಿಯಾಗಿದೆ ಬದುಕೋಕೆ? ಸೌಕರ್ಯಗಳಿವೆಯಲ್ಲ. ಎಲ್ಲಾ ಮಾಡ್ಕೊಟ್ಟಿದ್ದಾನೆ."

ಮಂದಾಕಿನಿ ಸಿರ್ ಅಂದ್ಲು.

"ಅದೇನು? ನೀವು ಎಂ.ಎಸ್ಸಿ. ಮಾಡಿದ್ರಿ? ಬ್ಯಾಂಕಲ್ಲಿ ಪ್ರೊಬೇಷನರಿ ಆಫೀಸರ್ ಆಗಿದ್ರಿ. ನೋಡೋಕೆ ಚೆನ್ನಾಗಿದ್ರಿ? ಮಾವ ಹೈಸ್ಕೂಲು ಡ್ರಾಪ್‌ಔಟು. ಅಪ್ಪನ ಕಾಂಟ್ರಾಕ್ಟರ್ ವೃತ್ತಿ ಇತ್ತು. ಅದನ್ನು ಮುಂದುವರಿಸ್ತಿದ್ದ. ಅದೇನು ಇವರಿಗೆ ಕೊಟ್ಟು ಮದುವೆ ಮಾಡಿದ್ರು ನಿಮ್ಮನ್ನ? 22ನೇ ವಯಸ್ಸಿಗೇನೇ. ಅದೇನು?"

ಅತ್ತೆ ಎದ್ರು.

"ಕೂತ್ಕೊಳ್ಳಿ. ಕೂತು ಕೇಳಿಸ್ಕೊಳ್ಳಿ. ಉತ್ತರ ಬೇಕು ನನ್ಗೆ. ಊರೆಲ್ಲಾ ಸುದ್ದಿಯಾಗಿತ್ತು, ಬಸ್‌ಸ್ಟ್ಯಾಂಡ್ ಟಾಯ್ಲೆಟ್‌ನಲ್ಲಿ ನಿಮ್ಮ ಹೆಸರಿನೊಟ್ಟಿಗೆ ಮತ್ತೊಬ್ಬನ ಹೆಸರು ಸೇರ್ಸಿ ಬರ್ದಿದ್ರು. ಕೆಲ್ಸ ಕಾರ್ಯ ಬಿಟ್ಟು ಮೂರು ತಿಂಗ್ಳು ನೀವು ನಾಪತ್ತೆ ಅಂತೆ. ಅಪ್ಪ, ಅಮ್ಮ ಹುಡುಕಿಸಿ, ಪೊಲೀಸ್ ಸಹಾಯದಿಂದ ಅದೆಲ್ಲಿಂದ್ಲೋ ನಿಮ್ಮನ್ನ ಎತ್ತಿಕೊಂದು ಬಂದಿದ್ರಂತೆ."

ಅತ್ತೆ ಭುಸುಗುಟ್ಟುತ್ತಿದ್ರು.

"ಎಲ್ಲ ಬಣ್ಣದ ಚಿಟ್ಟೆಗಳು ನಿನ್ನೆ ಕಂಬ್ಳಿ ಹುಳೂನೇ. ಮದುವೆ ಅಂತ ಇವ್ರನ್ನ ನೀವಾದದ್ದು ಯಾತಕ್ಕೆ ಮಾವ? ಇವರ ಅಮ್ಮ ಏನೋ ನಿಮ್ಗೆ ಕಸಿನ್. ಹತ್ತಿರದ ನೆಂಟಸ್ಥಿಕೆ ಅಷ್ಟಕ್ಕಾ? ಚೆನ್ನಾಗಿದ್ರು, ಒಳ್ಳೇ ಕೆಲ್ಸದಲ್ಲಿದ್ರು, ಓದಿದ್ರು. ಅದಕ್ಕಾ? ನಿಮ್ಮಪ್ಪ ಆ ಕಾಲದಲ್ಲಿ 10 ಲಕ್ಷಕ್ಕೆ ನಿಮ್ಮನ್ನ ಮಾರಿದ್ರಂತೆ. 10 ಲಕ್ಷ ಕೊಡ್ತಾರೆ ಮದುವೆ ಮಾಡ್ಕೋ. ನಿನ್ಗೆ ಓದಿಲ್ಲ, ಕೆಲ್ಸ ಇಲ್ಲ. ಸಂಸಾರ ಅಂತಾಗ್ಲಿ ಅಂತಂದ್ರಂತೆ. ಹೇಳಿದ್ದು ಕೇಳ್ಲಿಲ್ಲ ಅಂದ್ರೆ ಆಸ್ತಿ ಇಲ್ಲ ಅಂದ್ರಂತೆ. ಹಾಗಲ್ವ ಆದದ್ದು ಮದ್ವೆ? ತಳಿ ಬಗ್ಗೆ ಮಾತಾಡ್ಬಾರ್ದು ಮಾವ. ಇಲ್ಲಿ ಯಾರ ತಳೀನೂ ಅದರ ಮೂಲ ಸ್ವರೂಪದಲ್ಲಿಲ್ಲ."

ಮಾವ ಅಂದ್ರು, "ಹೊಲಸು."

ಅದಕ್ಕಿವಳಂದ್ಲು, "ಹೌದು ಹೊಲಸು. ನಾಲ್ಕು ಜನ ಅಣ್ಣತಮ್ಮಂದಿರು, ಆರು ಜನ ಅಕ್ಕ ತಂಗೀರು ನಿಮಗೆ. ಅಪ್ಪ ಸಾಯ್ತಿದ್ದಾಗ ಒಂದು ಉಯಿಲು ಬಲವಂತವಾಗಿ ಬರೆಸಿ ಅವರ್‍ಯಾರಿಗೂ ಮೂರು ಕಾಸು ಆಸ್ತಿ ಕೊಡದ ಹಾಗೆ ಮಾಡಿ ನೀವು ಲಪಟಾಯಿಸಿದ್ದಲ್ವಾ? ಎಲ್ಲ ಮರ್ಯಾದಸ್ಥರು. ಹೊಲಸು ಯಾಕೆ ಅಂತ ಗುದ್ದಾಡದೇ ಅವರವರ ದಾರಿ ಹಿಡಿದಿದ್ರು. ಆದ್ರೆ